ಓ.ಎಸ್ಃ 17/2013
ಪಿ.ಡಬ್ಲ್ಯೂಃ 02
**ಗಂಗಪ್ಪ ಬಳೂತಿ**

ದಿನಾಂಕಃ **06-10-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು

ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎಂ.ಹೆಚ್.ಕೆ ವಕೀಲರಿಂದಃ

**1.** ಸದರಿ ದಾವೆಯನ್ನು ಸಲ್ಲಿಸಿದ ದಾವಾ ಸ್ವತ್ತಿನ ನಿವೇಶನ ನಂಬರ 2232 ಇರುತ್ತದೆ. ಅದರಲ್ಲಿ ತಾತ್ಕಾಲಿಕ ಶೆಡ್ಡು ಇದೆ. ಸದರಿ ನಿವೇಶನವನ್ನು 1 ನೇ ಪ್ರತಿವಾದಿಯ ಗಂಡನಿಗೆ ಸರ್ಕಾರದವರು ನೀಡಿದ್ದಾರೆ ಎಂದರೆ ಸರಿ. ಆದ್ದರಿಂದ ಸದರಿ ನಿವೇಶನದಲ್ಲಿ 1 ನೇ ಪ್ರತಿವಾದಿಯ ಗಂಡನೇ ಕಬ್ಜಾಕ್ಕೆ ಬಂದಿದ್ದನು ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಸದರಿ ನಿವೇಶನವನ್ನು 1 ನೇ ಪ್ರತಿವಾದಿಯ ಗಂಡನಿಗೆ ಅವರ ಕುಟುಂಬದ ಪರವಾಗಿ ಸರ್ಕಾರದವರು ನೀಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**2.** ಸದರಿ 1 ನೇ ಪ್ರತಿವಾದಿಯ ಗಂಡ ತೀರಿಕೊಂಡ ನಂತರ 1 ನೇ ಪ್ರತಿವಾದಿಯೇ ಸದರಿ ನಿವೇಶನಕ್ಕೆ ವಾರಸವಾಗಿದ್ದಾರೆ ಎಂದರೆ ಸರಿ. ಸದರಿ ವಾರಸ ಪ್ರಕಾರ 1 ನೇ ಪ್ರತಿವಾದಿಯೇ ದಾವಾ ಸ್ವತ್ತಿನ ಕಬ್ಜಾಕ್ಕೆ ಬಂದರು ಎಂದರೆ ಸರಿ. ನಂತರ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ದಾವಾ ಸ್ವತ್ತಿನ್ನು ಮಾರಾಟ ಮಾಡಿದ್ದಾಳೆ ಎಂದರೆ ಸರಿ. ಈಗ ಸದರಿ ದಾವಾ ಸ್ವತ್ತಿನಲ್ಲಿ 2 ನೇ ಪ್ರತಿವಾದಿಯೇ ಇದ್ದಾಳೆ ಎಂದರೆ ಸರಿ.

**3.** ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ವಾದಿಯೇ ಹೇಳಿ ಬರೆಸಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡನ ತಂದೆಯಾದ ಚಂದಪ್ಪನಿಗೆ ಮೂರು ಜನ ಮಕ್ಕಳು ಅವರೆಂದರೆ **1.** ಹಣಮಂತ **2.** ಸಂಗಪ್ಪ **3.** ಶಿವಪ್ಪ. ಸದರಿ ಸಂಗಪ್ಪ ಮತ್ತು ಶಿವಪ್ಪನಿಗೆ ಸರ್ಕಾರದಿಂದ ಬೇರೆ ಆಸ್ತಿಗಳು ಮಂಜೂರಾಗಿವೆ ಎಂದರೆ ಸರಿ. ಅವರಿಗೆ ಮಂಜೂರಾದ ಸ್ವತ್ತುಗಳಲ್ಲಿ ಅವರೇ ಸ್ವಾಧೀನಾನುಭೋಗದಲ್ಲಿದ್ದಾರೆ ಎಂದರೆ ಸರಿ.

**4.** ದಾವಾ ಸ್ವತ್ತಿಗೆ ವಾದಿ, ಮತ್ತು ಸಂಗಪ್ಪ ಯಾವುದೇ ರೀತಿಯ ಸಂಬಂಧ ಹೊಂದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಸಂಗಪ್ಪನಾಗಲೀ ಅಥವಾ ಶಿವಪ್ಪನಾಗಲೀ ಕಬ್ಜಾದಲ್ಲಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**5.** ದಾವಾ ಸ್ವತ್ತಿನಲ್ಲಿ ಹಣಮಂತ, ಸಂಗಪ್ಪ ಮತ್ತು ಶಿವಪ್ಪ ವಾಟ್ನಿ ಮಾಡಿಕೊಂಡಾಗ ನಾನು ಇರಲಿಲ್ಲ. ಆದರೆ ಸದರಿ ವಾಟ್ನಿಯನ್ನು ಅವರು ಬಾಯಿ ಮಾತಿನಲ್ಲಿ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತು. ದಾವಾ ಸ್ವತ್ತಿನಲ್ಲಿ ಯಾರು ಯಾವ ಯಾವ ದಿಕ್ಕಿನ ಸ್ವತ್ತಿನಲ್ಲಿದ್ದಾರೆ ಎಂದು ಹೇಳಲು ಬರುವುದಿಲ್ಲ. ಸಂಗಪ್ಪ ಮತ್ತು ಶಿವಪ್ಪ ಯಾವುದೇ ಸಮಯದಲ್ಲಿಯೂ ದಾವಾ ಸ್ವತ್ತಿನ ಸ್ವಾಧೀನಾನುಭೋಗದಲ್ಲಿರಲೇ ಇಲ್ಲ ಎಂದರೆ ಸರಿಯಲ್ಲ. ಇವತ್ತಿನವರೆಗೂ 2ನೇ ಪ್ರತಿವಾದಿಯೇ ದಾವಾ ಸ್ವತ್ತಿನ ಸ್ವಾಧೀನಾನುಭೋಗದಲ್ಲಿದ್ದಾರೆ, ಶಿವಪ್ಪ ಮತ್ತು ಸಂಗಪ್ಪ ಇಲ್ಲ ಎಂದರೆ ಸರಿಯಲ್ಲ.

**6.** ಶಿವಪ್ಪ ನನಗೆ ಆತ್ಮೀಯ ಎಂದರೆ ಸಾಕ್ಷಿಯು ಅವರು ನನ್ನ ತಮ್ಮ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯ ಮತ್ತು ನನ್ನ ನಡುವೆ ಸಂಬಂಧ ಸರಿಯಿಲ್ಲ ಎಂದರೆ ಸರಿ. ಆದ ಕಾರಣ ಶಿವಪ್ಪನಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**ಓ.ಎಸ್ಃ 17/2013**

**ಪಿ.ಡಬ್ಲ್ಯೂಃ 02**

**ಗಂಗಪ್ಪ ಬಳೂತಿ**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**